ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) :

ಅ) ಇಲ್ಲ. ಗ್ರಾಮಸಹಾಯಕರು ಮಾಸಿಕ ರೂಪಾಯಿ.2000/– ರಂತೆ ಮಿತವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಗ್ರಾಮಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪಿತ್ತಿದೆ. ಗ್ರಾಮ ಸಹಾಯಕರು ಮಿತವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಅವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡದೇ ಇರುವುದರಿಂದ ಖಾಯಂಗೊಳಿಸಲು ಬರುವುದಿಲ್ಲ.

ಇ) ಹೌದು.

ಈ) (ಆ) ದಲ್ಲಿ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1315 (1876) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಸೋಶಿಯಲ್ ಫಾರೆಸ್ಟ್ರಿ) ಅಡಿಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ಹೊಸತೋಪುಗಳು ಯಾವುವು;

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಹಣದ ಹಾಗೂ ಖರ್ಚು ಮಾಡಿದ ಹಣದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಇ) ಸರ್ಕಾರ ಕೈಗೊಂಡ ಕ್ರಮವೇನು;

ಈ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳೇನು?

ಶ್ರೀ ಸಿ.ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ನೆಡುತೋಪುಗಳನ್ನು ರಕ್ಷಣೆ ಮಾಡುವುದು.

ಈ) 2006–07ನೇ ಸಾಲಿಗೆ ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಅಭಿವೃದ್ಧಿ ಬಗ್ಗೆ ಯಾವುದೇ ನೂತನ ಯೋಜನೆಗಳಿರುವುದಿಲ್ಲ. ಆದರೆ ಮುಂದುವರೆದ ಯೋಜನೆಗಳು ಈ ಕೆಳಕಂಡಂತಿವೆ.

1. ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ (ರಾಜ್ಯ)
2. ನಗರ ಪ್ರದೇಶ ಹೆಸರೀಕರಣ ಯೋಜನೆ (ರಾಜ್ಯ)
3. ಸಾರ್ವಜನಿಕರ ವಿತರಣೆಗೆ ಸಸಿ ಬೆಳೆಸುವ ಯೋಜನೆ (ರಾಜ್ಯ)
4. ರಾಷ್ಟ್ರೀಯ ಅರಣ್ಯೀಕರಣ ಯೋಜನೆ (ಕೇಂದ್ರ ಪುರಸ್ಕೃತ)
5. ಸ್ವರ್ಣಜಯಂತಿಕುಂಜ್ (ಕೇಂದ್ರ ಪುರಸ್ಕೃತ)
6. ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿದ್ಯಮಯ ಸಂರಕ್ಷಣೆ ಯೋಜನೆ

ಅನುಬಂಧ – 1

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಸೋಶಿಯಲ್ ಫಾರೆಸ್ಟ್ರಿ) ಅಡಿಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ಹೊಸ ನೆಡುತೋಪುಗಳ ವಿವರ.

ಕ್ರಸಂ.	ವರ್ಷ	ನೆಡುತೋಪಿನ ಹೆಸರು	ವಿಸ್ತೀರ್ಣ
1.	2004–05	ಕೋಳೂರ–ಯರಗಲ ರಸ್ತೆ	5 ಕಿ.ಮೀ
2.	–"–	ಯರಗಲ–ಮದರಿ ರಸ್ತೆ	5 ಕಿ.ಮೀ
3.	–"–	ಯರಗಲ–ಹುಲಕುಂಟೆ ರಸ್ತೆ	6 ಕಿ.ಮೀ

4.	–"–	ಹಂದ್ರಾಳ–ಮುದ್ದೇಬಿಹಾಳ ಹಂಗಡಗಿಕೆನಾಲ (31–32)	22 ಕಿ.ಮೀ
5.	–"–	ಮುದ್ದೇಬಿಹಾಳ–ತಂಗಡಗಿ ಕ್ರಾಸ್, ಆಲೂರ ಕ್ರಾಸ್ (42–52)	20 ಕಿ.ಮೀ
6.	–"–	ಇಂಗಳಗೇರಿ–ಹಂದ್ರಾಳ–ವಡಹಳ್ಳಿ ರಸ್ತೆ	5 ಕಿ.ಮೀ
7.	–"–	ಮುದ್ದೇಬಿಹಾಳ ಕ್ರಾಸ್–ಇಂಚಗೇರಿ ರಸ್ತೆ	5 ಕಿ.ಮೀ
8.	–"–	ಮಡಿಕೇಶ್ವರ ನಡಹಳ್ಳಿ ಮಿರಾಜ್ ರಸ್ತೆ	5 ಕಿ.ಮೀ
9.	–"–	ಕುಚಬಾಳೆ–ಮುದ್ದೇಬಿಹಾಳ ರಸ್ತೆ	5 ಕಿ.ಮೀ
10.	–"–	ನಾಲೀವಾದ–ಅರೇಶಂಕರ ನಾರಾಯಣಪುರ ಕ್ರಾಸ್ ರಸ್ತೆ	5 ಕಿ.ಮೀ
11.	2005–06	ಘನಮಠೇಶ್ವರ–ಕುಂಟೋಜಿ ರಸ್ತೆ	3.75 ಕಿ.ಮೀ
12.	–"–	ನಾಗರಬೆಟ್ಟ–ಚಂಬನಬಾವಿ ರಸ್ತೆ	6.25 ಕಿ.ಮೀ
13.	–"–	ಡವಳಗಿ–ಮುದ್ದೇಬಿಹಾಳ ಕ್ರಾಸ್ ರಸ್ತೆ	5 ಕಿ.ಮೀ
14.	–"–	ಬಳಗಾಸೂರ – ಕೊಣ್ಣೂರ ರಸ್ತೆ	5 ಕಿ.ಮೀ

ಅನುಬಂಧ – 2

(ಆರ್ಥಿಕ ರೂ.ಲಕ್ಷಗಳಲ್ಲಿ)
(ಭೌತಿಕ ಹೆಕ್ಟೇರ್‌ಗಳಲ್ಲಿ)

ತಾಲ್ಲೂಕು	2004–2005				2005–2006			
	ಭೌತಿಕ		ಆರ್ಥಿಕ		ಭೌತಿಕ		ಆರ್ಥಿಕ	
	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
ಇಂಡಿ	10	9	7.227	6.208	30	2	7.00	7.604

ಸಿಂದಗಿ	15	11	4.062	5.079	35	25	3.25	6.656
ವಿಜಾಪುರ	10	8	5.499	5.104	30	15	7.775	7.25
ಬ.ಬಾಗೇವಾಡಿ	20	8	4.002	3.777	35	28	6.795	5.00
ಮುದ್ದೇಬಿಹಾಳ	78	83	18.561	10.208	35	20	12.00	9.258

1317 (1878) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) :– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿನ ಅಂತರ್ಜಲ ಮಟ್ಟದ ಸುಧಾರಣೆಗಾಗಿ ಸರ್ಕಾರದ ಯೋಜನೆಗಳೇನು (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಜಿಲ್ಲಾ ವ್ಯಾಪ್ತಿಯ ಬೋರ್‌ವೆಲ್‌ಗಳಲ್ಲಿ ಹಾಗೂ ತೆರೆದ ಬಾವಿಗಳಲ್ಲಿ ಅಂತರ್ಜಲ ಮಟ್ಟದ ಕುಸಿತದಿಂದಾಗಿ ನೀರು ಲಭ್ಯವಾಗದ ನೀರಾವರಿ ಹಾಗೂ ಕುಡಿಯುವ ನೀರಿಗಾಗಿ ಜನರು ತೀವ್ರ ಸಂಕಷ್ಟವನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ನೀರಿನ ಲಭ್ಯತೆಯ ಕೊರತೆಯಿಂದಾಗಿ ಬೆಳೆ ನಾಶವನ್ನು ಅನುಭವಿಸಿದ ರೈತರುಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ'

ಉ) ನೀಡಿದ್ದಲ್ಲಿ ಅದರ ವಿವರಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಅಂತರ್ಜಲ ಮರು ಪೂರೈಕೆಗೆ ವಿವಿಧ ರೀತಿಯ ರಚನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೃಷಿ, ಅರಣ್ಯ, ಜಲಾನಯನ ಅಭಿವೃದ್ಧಿ ಮತ್ತು ಇನ್ನಿತರೆ ಸರ್ಕಾರ ಇಲಾಖೆಗಳು ವಾರ್ಷಿಕ ಕಾರ್ಯಕ್ರಮ ಹಮ್ಮಿಕೊಂಡಿರುತ್ತವೆ. ರಚನೆಗಳನ್ನು ನಿರ್ಮಿಸಲು ವೈಜ್ಞಾನಿಕ ರೀತಿಯಲ್ಲಿ ಇಲಾಖಾವತಿಯಿಂದ ತಾಂತ್ರಿಕ ಸಲಹೆಗಳನ್ನು ಕೋರಿಕೆ ಮೇರೆಗೆ ನೀಡಲಾಗುತ್ತಿದೆ.